**ಓ.ಎಸ್. – 138/2018**

**ಪಿ.ಡಬ್ಲೂ – 1**

**ಸಾಕ್ಷಿಯನ್ನು ದಿಃ 06.06.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಟಿ.ಬಿ.ಎಂ. ವಕೀಲರಿಂದ**

1. ದಾವಾ ಸ್ವತ್ತು ಕಂದಾಯ ಭೂಮಿಯಾಗಿರುತ್ತದೆ ಎಂದರೆ ಸರಿ. ತುಮರಿಕೊಪ್ಪ ಗ್ರಾಮವು ಯಡೇಹಳ್ಳಿ ಪಂಚಾಯಿತಿ ವ್ಯಾಪ್ತಿಗೆ ಸೇರುತ್ತದೆ ಎಂದರೆ ಸರಿ. ಸರ್ವೇ ನಂಬರ್ 10 ನ್ನು ಯಡೇಹಳ್ಳಿ ಪಂಚಾಯಿತಿಗೆ ವರ್ಗಾಯಿಸಿಲ್ಲ ಎಂದರೆ ಸರಿ. ನಾನು ಯಡೇಹಳ್ಳಿ ಪಂಚಾಯಿತಿಯಲ್ಲಿ 2 ಬಾರಿ ಅಧ್ಯಕ್ಷನಾಗಿದ್ದೆ. ಈಗ ನಾನು ಸದರಿ ಪಂಚಾಯಿತಿಯಲ್ಲಿ ಸದಸ್ಯನಾಗಿರುವುದಿಲ್ಲ. ಅಡೂರು, ಕೆರೆಕೊಪ್ಪ, ಹಾರನಹಳ್ಳಿ, ಇರುವಕ್ಕಿ ಗ್ರಾಮಗಳು ಯಡೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರುತ್ತವೆ.

2. ಅಡೂರು ಗ್ರಾಮದಲ್ಲಿ 400 ಮನೆಗಳಿವೆ ಎಂದರೆ ಸಾಕ್ಷಿಯು 150 ಮನೆಗಳಿರುತ್ತವೆ ಎಂದು ನುಡಿಯುತ್ತಾರೆ. ದಂಟಿನಕೊಪ್ಪ ಗ್ರಾಮದಲ್ಲಿ 400 ಮನೆಗಳಿವೆ ಎಂದರೆ ಸಾಕ್ಷಿಯು ಅಲ್ಲಿಯೂ 150 ಮನೆಗಳಿರುತ್ತವೆ ಎಂದು ನುಡಿಯುತ್ತಾರೆ. ಇರುವಕ್ಕಿ ಗ್ರಾಮದಲ್ಲಿ 300 ಮನೆಗಳಿವೆ ಎಂದರೆ ಸಾಕ್ಷಿಯು 250 ಮನೆಗಳಿರುತ್ತವೆ ಎಂದು ನುಡಿಯುತ್ತಾರೆ. ಅಡೂರಿನ ಮಜಿರೇ ಗ್ರಾಮದಲ್ಲಿ 150 ಮನೆಗಳಿರುತ್ತವೆ. ಹೆಬ್ಬೋಡಿ ಕಲ್ಲುಕೊಪ್ಪ ಗ್ರಾಮಗಳಲ್ಲಿ 150 ಮನೆಗಳಿರುತ್ತವೆ.

3. ಅಡೂರು ಗ್ರಾಮವು ತುಮರಿಕೊಪ್ಪ ದಿಂದ 2 ಫರ್ಲಂಗ್ ಅಂತರದಲ್ಲಿರುತ್ತದೆ ಎಂದರೆ ಸಾಕ್ಷಿಯು 2 1/2 ಕಿ ಮೀ ಅಂತರದಲ್ಲಿದೆ ಎಂದು ನುಡಿಯುತ್ತಾರೆ. ಇರುವಕ್ಕಿ, ದಂಟಿನಕೊಪ್ಪ ಗ್ರಾಮ ತುಮರಿಕೊಪ್ಪ ದಿಂದ 4 ಕಿ ಮೀ ಅಂತರದಲ್ಲಿರುತ್ತದೆ. ಉಳಿದ ಗ್ರಾಮಗಳು 2 1/2 ಕಿ ಮೀ ಅಂತರದಲ್ಲಿ ಬರುತ್ತವೆ. ಇರುವಕ್ಕಿ ಗ್ರಾಮದಲ್ಲಿ ಕೃಷಿ ವಿಶ್ವ ವಿದ್ಯಾಲಯ ಇರುತ್ತದೆ ಎಂದರೆ ಸರಿ. ಆನಂದಪುರ ತುಮರಿಕೊಪ್ಪ ದಿಂದ 5 ಕಿ ಮೀ ಅಂತರದಲ್ಲಿರುತ್ತದೆ ಎಂದರೆ ಸಾಕ್ಷಿಯು 6 ಕಿ ಮೀ ಅಂತರದಲ್ಲಿರುತ್ತದೆ ಎಂದು ನುಡಿಯುತ್ತಾರೆ.

4. ನನ್ನ ಅಜ್ಜನ ಹೆಸರು ಬಸಪ್ಪಗೌಡ ಎಂದರೆ ಸರಿ. ನನ್ನ ಅಜ್ಜನಿಗೆ ವೀರಪ್ಪ ಗೌಡ ಮತ್ತು ಸಿದ್ದಪ್ಪ ಗೌಡ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿ. ನಾನು ಹಾಗೂ ಈ ದಾವೆಯ ವಾದಿಯರ ಪೈಕಿ 1,3, 5 ರಿಂದ 8 ರವರು ವೀರಪ್ಪಗೌಡರ ಮಕ್ಕಳು ಎಂದರೆ ಸರಿ.

2 ನೇ ವಾದಿ ಸಿದ್ದಪ್ಪಗೌಡರ ಮಗ, 4 ನೇ ವಾದಿ ಸಿದ್ದಪ್ಪಗೌಡರ ಮೊಮ್ಮಗ ಎಂದರೆ ಸರಿ. ಪ್ರತಿವಾದಿಯರು ನಂಜುಂಡಪ್ಪ ಗೌಡರ ಮಕ್ಕಳು ಎಂದರೆ ಸರಿ. ಈಗ ನಾನು ನೋಡುತ್ತಿರುವ ಸರ್ವೇ ಸಂಖ್ಯೆ 16 ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸರ್ವೇ ಸಂಖ್ಯೆ 16 ರ 2020–21 ನೇ ಸಾಲಿನ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು.

5. ಸರ್ವೇ ನಂಬರ್ 10 ರಲ್ಲಿ ನಂಜುಂಡಪ್ಪ ಗೌಡರಿಗೆ ಮನೆದಳಕ್ಕೆಂದು 1 ಎಕರೆ 8 ಗುಂಟೆ ಸ್ವತ್ತು ಮಂಜೂರಾಗಿರುತ್ತದೆ. ಸದರಿ ಸ್ವತ್ತಿನಲ್ಲಿ ಪ್ರತಿವಾದಿಯರು ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ. ನಂಜುಂಡಪ್ಪ ಗೌಡರಿಗೆ ಮಂಜೂರಾಗಿರುವ ಜಾಗಕ್ಕೆ ಸರ್ವೇ ನಂಬರ್ 21 ಎಂದು ಹೊಸ ಸರ್ವೇ ನಂಬರ್ ನ್ನು ನೀಡಲಾಗಿದೆ ಎಂದರೆ ಸರಿ. ವೀರಪ್ಪ ಗೌಡ ಮತ್ತು ಸಿದ್ದಪ್ಪ ಗೌಡರಿಗೆ ಸರ್ವೇ ನಂಬರ್ 10 ರಲ್ಲಿ ಸ್ವತ್ತು ಮಂಜೂರಾಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ವೀರಪ್ಪ ಗೌಡ ಮತ್ತು ಸಿದ್ದಪ್ಪ ಗೌಡರ ತಂದೆ ಬಸಪ್ಪ ಗೌಡರ ಮನೆ ಸರ್ವೇ ನಂಬರ್ 10 ರಲ್ಲಿ ಇರುತ್ತದೆ. ಸರ್ವೇ ನಂಬರ್ 10 ರಲ್ಲಿ ವೀರಪ್ಪಗೌಡ ಮತ್ತು ಸಿದ್ದಪ್ಪ ಗೌಡ 2 ಮನೆಗಳನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿ.

6. ಸಿದ್ದಪ್ಪಗೌಡರ ಮನೆಯಲ್ಲಿ 2 ಮತ್ತು 4 ನೇ ವಾದಿಯರು ವಾಸಿಸುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರಿಬ್ಬರು ಮನೆಯನ್ನು ಪ್ರತ್ಯೇಕ ಮಾಡಿಕೊಂಡು ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ವೀರಪ್ಪಗೌಡರ ಮನೆಯಲ್ಲಿ 1,3,5 ರಿಂದ 8 ನೇ ವಾದಿಯರು ವಾಸವಾಗಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವೆಲ್ಲರೂ ಪ್ರತ್ಯೇಕವಾಗಿ ಸರ್ವೇ ನಂಬರ್ 10 ರಲ್ಲಿಯೇ ಬೇರೆ ಬೇರೆ ಕಡೆ ವಾಸ ಮಾಡುತ್ತಿರುತ್ತೇವೆ ಎಂದು ನುಡಿಯುತ್ತಾರೆ. ನಮಗೆ ಸರ್ವೇ ನಂಬರ್ 10 ರಲ್ಲಿ ಯಾವುದೇ ಜಮೀನು ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮಗೆ ಸರ್ಕಾರದವರು ಹಕ್ಕು ಪತ್ರವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

7. ತುಮರಿಕೊಪ್ಪ ಗ್ರಾಮದಲ್ಲಿ ಒಟ್ಟು 6 ಮನೆಗಳು ಮಾತ್ರ ಇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 22 ಮನೆಗಳಿರುತ್ತವೆ ಎಂದು ನುಡಿಯುತ್ತಾರೆ. ಮಂಜಪ್ಪ,ಸಿದ್ದಪ್ಪ, ಪುಟ್ಟಪ್ಪ, ಚೂಡಾಮಣಿ ಮಂಜಪ್ಪ, ಶಿವಪ್ಪ, ಗಣಪತಿ ಬಡಿಯಪ್ಪ, ಬೋಜಪ್ಪ ಇವರುಗಳ ಮನೆ ತುಮರಿಕೊಪ್ಪ ಗ್ರಾಮದಲ್ಲಿ ಬರುತ್ತದೆ.

ಸದರಿರವರುಗಳು ಬೇರೆ ಜನಾಂಗಕ್ಕೆ ಸೇರಿದ ಜನರಾಗಿರುತ್ತಾರೆ. ಅಡೂರು ಗ್ರಾಮದಲ್ಲಿ ಹಿರಿಯ ಪ್ರಾಥಮಿಕ ಶಾಲೆ ಇರುತ್ತದೆ ಎಂದರೆ ಸರಿ. ಆವಿನಹಳ್ಳಿ ಗ್ರಾಮದಲ್ಲಿ 50 ಹಾಸಿಗೆಯುಳ್ಳ ಆಸ್ಪತ್ರೆ ಇದೆ ಎಂದರೆ ಸರಿ.

8. ಸರ್ವೇ ನಂಬರ್ 10 ರ ವಿಸ್ತೀರ್ಣ 180 ಎಕರೆ 37 ಗುಂಟೆ ಎಂದರೆ ಸರಿ. ಸರ್ವೇ ನಂಬರ್ 10 ರಲ್ಲಿ ಒಂದು ಕೆರೆ ಇರುತ್ತದೆ ಎಂದರೆ ಸರಿ. ಕೆರೆಯ ಪಕ್ಕದಲ್ಲಿ ನಮಗೆ ಸೇರಿದ ತೋಟವಿರುತ್ತದೆ ಎಂದರೆ ಸರಿ. ನಾನು ಕೆರೆ ಸೇರಿಸಿ 8 ಎಕರೆ ಪ್ರದೇಶಕ್ಕೆ ಬೇಲಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಕೆರೆಯನ್ನು ಒತ್ತುವರಿ ಮಾಡಿ ಜಾನುವಾರುಗಳಿಗೆ ನೀರಿಲ್ಲದಂತೆ ಮಾಡಿ ಕೆರೆಯನ್ನು ತೋಟ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿಯರು ಅವರ ತಂದೆಯ ಕಾಲದಿಂದಲೂ ದಂಡದ ಕಂದಾಯವನ್ನು ಪಾವತಿ ಮಾಡುತ್ತಾ ಸಾಗುವಳಿ ಮಾಡುತ್ತಾ ಬರುತ್ತಿರುತ್ತಾರೆ ಎಂದರೆ ಸರಿಯಲ್ಲ. ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸುವ ಪ್ರಕ್ರಿಯೆ ಸರ್ಕಾರದಿಂದ ನಡೆಯುತ್ತಿದೆ ಎಂದರೆ ಸರಿ.

9. ದಾವಾ ಸ್ವತ್ತಿನ ಮಂಜೂರಾತಿಗಾಗಿ ಪ್ರತಿವಾದಿಯರು ಸಲ್ಲಿಸಿರುವ ಅರ್ಜಿಯು ಬಗರ್ ಹುಕುಂ ಮಂಜೂರಾತಿ ಸಮಿತಿಯ ಮುಂದೆ ವಿಚಾರಣೆಯ ಹಂತದಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಸಾಗುವಳಿ ಮಾಡುತ್ತಿರುವ ಜಮೀನಿನ ಪಶ್ಚಿಮ ದಿಕ್ಕಿಗೆ ಸರ್ವೇ ನಂಬರ್ 10 ರಲ್ಲಿ ನಾನು ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿ. ಮನೆ ಕಟ್ಟಲು ಸ್ವತ್ತು ನನಗೆ ಸರ್ಕಾರದಿಂದ ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 10 ರಲ್ಲಿ ಮನೆ ಕಟ್ಟಿರುವ ಜಾಗದ ಸುತ್ತ ಅಂದಾಜು 60 ಎಕರೆ ಅಗಳ ತೆಗೆದು ಒತ್ತುವರಿ ಮಾಡಿ ಬೇಲಿ ಹಾಕಿದ್ದೇವೆ ಎಂದರೆ ಸರಿಯಲ್ಲ.

10. 3 ನೇ ವಾದಿಯ ಮಗನ ಹೆಸರು ಮೇಘರಾಜ ಎಂದರೆ ಸರಿ. ಮೇಘರಾಜ ಸಾಗರದಲ್ಲಿ ರಾಜಕೀಯ ಚಟುವಟಿಕೆಗಳನ್ನು ನಡೆಸುತ್ತಿರುತ್ತಾರೆ ಎಂದರೆ ಸರಿ. ಮೇಘರಾಜ ಶಿವಮೊಗ್ಗದ ಪ್ರಮುಖ ಪಕ್ಷದಲ್ಲಿ ಜಿಲ್ಲಾಧ್ಯಕ್ಷರಾಗಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹಿಂದೆ ಆಗಿದ್ದರು, ಈಗ ಇಲ್ಲ ಎಂದು ನುಡಿಯುತ್ತಾರೆ. ಮೇಘರಾಜ ಈಗಲೂ ಸದರಿ ಪಕ್ಷದಲ್ಲಿ ಪ್ರಮುಖ ನಾಯಕರಾಗಿರುತ್ತಾರೆ ಎಂದರೆ ಸರಿ.

ಮೇಘರಾಜರ ರಾಜಕೀಯ ಪ್ರಭಾವವನ್ನು ಬಳಸಿ ಸರ್ವೇ ನಂಬರ್ 10 ರಲ್ಲಿ 60 ಎಕರೆ ಸ್ವತ್ತನ್ನು ನಾವು ಒತ್ತುವರಿ ಮಾಡಿ ಬೇರೆ ಯಾರೂ ಬರದಂತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

11. ಪ್ರತಿವಾದಿಯರು ಸಾಗುವಳಿ ಮಾಡುತ್ತಿರುವ ದಾವಾ ಸ್ವತ್ತಿನಲ್ಲಿ ಗೇರು ಗಿಡಗಳು ಮತ್ತು ಇತರೆ ಫಸಲು ಇರುತ್ತದೆ ಎಂದರೆ ಸರಿಯಲ್ಲ. ನಾನು ರಾಜಕೀಯವಾಗಿ ಪಂಚಾಯಿತಿಯಲ್ಲಿ ಇದ್ದ ಸಂದರ್ಭದಲ್ಲಿ ಪ್ರತಿವಾದಿಯರನ್ನು ದಾವಾ ಸ್ವತ್ತಿನಿಂದ ಹೊರಹಾಕುವ ಉದ್ದೇಶದಿಂದ ದಾವಾ ಸ್ವತ್ತಿನಲ್ಲಿ ಆಸ್ಪತ್ರೆ ಮತ್ತು ಶಾಲೆ, ಅಂಗನವಾಡಿ, ಶಾಲಾ ಮೈದಾನದ ಅವಶ್ಯಕತೆ ಇದೆ ಎಂದು ಪಂಚಾಯಿತಿಯಿಂದ ಠರಾವನ್ನು ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ದಾವಾ ಸ್ವತ್ತಿನಲ್ಲಿ ಆಸ್ಪತ್ರೆ, ಶಾಲೆ, ಅಂಗನವಾಡಿ, ಶಾಲಾ ಮೈದಾನ, ಒಕ್ಕಲು ಕಣ ಬೇಕೆಂದು ಗ್ರಾಮಸ್ಥರು ನೀಡಿದ ಅರ್ಜಿಯ ಮೇರೆಗೆ ಠರಾವನ್ನು ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ನಮ್ಮ ಕುಟುಂಬದವರನ್ನು ಹೊರತುಪಡಿಸಿ ಇತರರು ವಾದಿಗಳಾಗಿ ಸೇರಿಲ್ಲ ಎಂದರೆ ಸರಿ.

**ಪ್ರತಿವಾದಿಯರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ